4. a) ಪ್ರಕಟಣೆ

ಮಾನ್ಯ ಮುಖ್ಯಮಂತ್ರಿಯವರು ಈ ದಿನ ರಾತ್ರಿ 8.00 ಗಂಟೆಗೆ ಬೆಳಗಾವಿಯ ಹೋಟೆಲ್ ಸಂಕಮ್‌ನಲ್ಲಿ ಮಾನ್ಯ ಸದಸ್ಯರುಗಳ ಗೌರವಾರ್ಥ ಔತಣ ಕೂಟವನ್ನು ಏರ್ಪಡಿಸಿರುತ್ತಾರೆ. ತಾವುಗಳೆಲ್ಲರೂ ಔತಣ ಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

5. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು: ಈಗ ಪ್ರಶ್ನೋತ್ತರ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಿಯಮ 69ರಡಿಯಲ್ಲಿ ಮಾತನಾಡಲು ನನ್ನದೊಂದು ವಿಷಯವಿದೆ.

ಅಧ್ಯಕ್ಷರು: ಇದರಲ್ಲಿಯೇ ಸೇರಿ ಮಾತನಾಡಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಕೊಡಗಿನಲ್ಲಿ ಸುಮಾರು 35–40 ವರ್ಷಗಳಲ್ಲಿ ಇಂಥ ಮಳೆ ಬಂದಿರಲಿಲ್ಲ.

ಅಧ್ಯಕ್ಷರು: ಆಯಿತು, ಮಧ್ಯದಲ್ಲಿ ಅವಕಾಶ ಕೊಡುತ್ತೇನೆ.

ಈಗ ಪ್ರಶ್ನೋತ್ತರ. ಶ್ರೀಮಾನ್ ಕೃಷ್ಣಾರೆಡ್ಡಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 106(2411)

ಶ್ರೀ ಎಂ. ಕೃಷ್ಣಾರೆಡ್ಡಿ (ಚಿಂತಾಮಣಿ): ಮಾನ್ಯ ಅಧ್ಯಕ್ಷರೆ, 2411ನೇ ಪ್ರಶ್ನೆಯನ್ನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕೇಳಬಯಸುತ್ತೇನೆ.

ಅಧ್ಯಕ್ಷರು: ಯಾರು ಉತ್ತರ ಹೇಳುತ್ತಾರೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಯಾವ ಸಚಿವರಿಗೂ ಈಗ ಪ್ರಶ್ನೋತ್ತರ ಇದೆ ಎಂದೇ ಗೊತ್ತಾಗಿಲ್ಲ.

ಅಧ್ಯಕ್ಷರು: ಏನು ಮಾಡುವುದು, ಈಗ ಪರಿಸ್ಥಿತಿ ಆ ರೀತಿಯಾಗಿ ಬಿಟ್ಟಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ರೀತಿಯಾದರೆ ಏನು ಮಡುವುದು?

ಅಧ್ಯಕ್ಷರು: ತಪ್ಪು ನಮ್ಮದಾಗುತ್ತದೆ. ಏಕೆಂದರೆ ನಮ್ಮ ಪರಂಪರೆ, ಸಂಪ್ರದಾಯದ ಪ್ರಕಾರ ಪ್ರಶ್ನೋತ್ತರ ಮಾಡಿಕೊಂಡು ನಂತರ ಚರ್ಚೆಗೆ ಬರಬೇಕು. ಈ ಒತ್ತಡದಿಂದಾಗಿ ಕೆಲವು demandಗಳನ್ನು ಪೂರೈಸಲೇಬೇಕಲ್ಲ. ಏನು ಮಾಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಅದು ಸರಿಯಿದೆ, ಅದನ್ನು ನಾನೂ ಒಪ್ಪುತ್ತೇನೆ. ವೇಳಾಪಟ್ಟಿಯಲ್ಲಿ ವ್ಯತ್ಯಾಸವಾಗಬಹುದು. ಆದರೆ, ಒಬ್ಬರಲ್ಲ ಒಬ್ಬರು ಇಲ್ಲಿ ಇದ್ದು ಪ್ರಶ್ನೋತ್ತರದ ಬಗ್ಗೆ ಜಾಗರೂಕರಾಗಿದ್ದು ಉತ್ತರ ಹೇಳುವುದಕ್ಕಾದರೂ ಸಿದ್ಧರಾಗಬೇಕಲ್ಲ.

ಶ್ರೀ ವೈ.ಎಸ್.ವಿ. ದತ್ತಾ: ಆಡಳಿತ ಪಕ್ಷದ ಸಚೇತಕರು ಇದ್ದಾರಲ್ಲ, ಅವರಿಂದ ಉತ್ತರ ಕೊಡಿಸಿ.

ಅಧ್ಯಕ್ಷರು: ಏಕೆಂದರೆ, ಅಜೆಂಡಾವನ್ನು, ಕಾರ್ಯಕಾರಿ ಪಟ್ಟಿಯನ್ನು ನಿನ್ನೆಯೇ ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಪ್ರಶ್ನೋತ್ತರ ಯಾವಾಗ ಬರುತ್ತದೆಯೆಂದು ಗೊತ್ತಾಗಿದೆ. ಅವರು ಇರಬೇಕು, ಇರುತ್ತಾರೆಂಬ ನಂಬಿಕೆ ಮೇಲೆ ನಾನು ಹೇಳಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ: ಇದು ಸಚೇತಕರ ಕೆಲಸ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಸಹಜವಾಗಿ ಪ್ರಶ್ನೋತ್ತರ 5 ಗಂಟೆಗೆ ಬರುವುದು ಎಂದು ಇದೆ. ಈಗ ಸಚೇತಕರನ್ನೇ ಹುಡುಕಬೇಕಾಗಿದೆ.

ಶ್ರೀ ವೈ.ಎಸ್.ವಿ. ದತ್ತಾ: ಆಡಳಿತ ಪಕ್ಷದ ಸಚೇತಕರಿದ್ದಾರಲ್ಲ, ಅವರು ಪ್ರಶ್ನೋತ್ತರ ಇದೆಯೆಂದು ಹೇಳಬೇಕು. ಈಗ ಸಚೇತಕರನ್ನೇ ಹುಡುಕಬೇಕು.

ಅಧ್ಯಕ್ಷರು: ಸಚಿವರು ಈಗ ಬರುತ್ತಾರೆ, ಕೃಷ್ಣಾರೆಡ್ಡಿಯವರೆ ಸ್ವಲ್ಪ ಇರಿ, ಉತ್ತರ ಕೊಡಿಸುತ್ತೇನೆ.

ಶ್ರೀ ರವಿ ಸುಬ್ರಹ್ಮಣ್ಯ.

ಆರ್.ಟಿ.ಇ. ಸೀಟುಗಳ ಹಂಚಿಕೆ

107(346); ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)

ಅ) 2015–16ನೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪಡೆದಿರುವ ಮಕ್ಕಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು)

ಆ) 2015–16ನೇ ಸಾಲಿನಲ್ಲಿ ಶಿಕ್ಷಣದ ಹಕ್ಕಿನ ಆರ್.ಟಿ.ಇ ಅನ್ವಯ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಈ ಪೈಕಿ ಹಂಚಿಕೆ ಮಾಡಲಾದ ಸೀಟುಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಈ) 2015–16ನೇ ಸಾಲಿನಲ್ಲಿ ಶಿಕ್ಷಣದ ಹಕ್ಕಿನ (RTE) ಅಡಿಯಲ್ಲಿ ಶಾಲಾ ಶುಲ್ಕ ಪಾವತಿಸಲು ಬಿಡುಗಡೆಯಾಗಿರುವ ಒಟ್ಟು ಅನುದಾನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ಶಿಕ್ಷಣದ ಹಕ್ಕಿನ (RTE) ಅನ್ವಯ ಸರ್ಕಾರದ ವತಿಯಿಂದ ತಲಾವಾರು ಪಾವತಿಯಾಗುತ್ತಿರುವ ಶುಲ್ಕವೆಷ್ಟು? (ಆದೇಶದ ಪ್ರತಿಯನ್ನು ನೀಡುವುದು)?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2015–16ನೇ ಶೈಕ್ಷಣಿಕ ಸಾಲಿನಲ್ಲಿ ಒಂದನೇ ತರಗತಿಗೆ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಕ್ರಿಯೆ ಜೂನ್ ಒಂದರಿಂದ